## ಚಿಕ್ಕಮಗಳೂರು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಿಂದ.

ಸನ್ 1902-1903ನೇ ಇಸವಿ ಮಿ|| ಅರ್ಜೀ ನಂಬರ 305.

ಮೃತಪಟ್ಟ ನಾಗಾಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಕಡೂರು ತಾಲ್ಲೂಕು ಸಖ್ರಾಯಪಟ್ಟಣದಲ್ಲಿರುವ ಸುಬ್ರಾಯಭಟ್ಟ ಯಾನೆ ಲಿಂಗಂಣೈಯ್ಯನು, ಮೃತಪಟ್ಟ ನಾಗಾಭಟ್ಟರಿಗೆ ದತ್ತುಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಸದರಿ ಸಖ್ರಾಯಪಟ್ಟಣದಲ್ಲಿ ವಾಸಸ್ಥರಾಗಿ ಮೃತಪಟ್ಟ ನಾಗಾಭಟ್ಟರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ರಾಯಭಟ್ಟ ಯಾನೆ ಲಿಂಗಂಣೈಯ್ಯನ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಾಭಟ್ಟರವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಏಪ್ರೈಲ್ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಮಿ|| ಅರ್ಜೀ ನಂಬರ 306.

ಮೃತಪಟ್ಟ ಅಬ್ದುಲ್‌ರಹಿಮಾನ್‌ಖಾನ್ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿಕ್ಕಮಗಳೂರು ಕಾಫಿಪ್ಲಾಂಟರ್ ಖಾಬೂಮಿಯ್ಯಾ ಸಾಬರ ಮಗಳು ಆಷಾಬಿಯು, ಮೃತಪಟ್ಟ ಸದರಿ ಅಬ್ದುಲ್‌ರಹಿಮಾನ್‌ಖಾನ್ ಯವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರಿ ಚಿಕ್ಕಮಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಅಬ್ದುಲ್‌ರಹಿಮಾನ್‌ಖಾನ್ ಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಆಷಾಬಿಯವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ದುಲ್‌ರಹಿಮಾನ್‌ಖಾನ್ ಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಏಪ್ರೈಲ್ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಪರಮಶಿವ ಅಯ್ಯರ್,
ಸಬಾರ್ಡಿನೇಟ್ ಜಡ್ಜ.

---

## ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ನೋಟಿಸ್.

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ನಾಲ್ಕನೇ ಡಿವಿಜನ್ ತಾರಾಮಂಡಲ್‌ಪೇಟೆ ನಾಲ್ಕು ಭಾವಿ ಬಳಿಯಣ ಖಾಲಿ ಜಮೀನಿನಲ್ಲಿ ಭಂಡಿಗಳು ವಗ್ಯೆರೆ ನಿಲ್ಲುವವರ ಕಡೆಯಿಂದ, ಜಮೀನ್ ಬಾಡಿಗೆಯನ್ನು 1903ನೇ ಇಸವಿ ಜುಲೈ ಗುರ್ರು ಲಾಗಾಯತು 1904ನೇ ಇಸವಿ ಜೂನ್ ಆಖ್ಯೆರವರಿಗೆ ರೋಜೀನಾ ಇದರಡಿ ನಮೂದಿಸಿರುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು :—

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್ :—

| | | | | ರೂ. ಆ. ಪೈ. |
|---|---|---|---|---|
| 1. | ಕಟ್ಟಿಗೆ ಮತ್ತು ಹುಲ್ಲುಭಂಡಿ 1ಕ್ಕೆ | .. | .. | 0—2—0 |
| 2. | ಕಟ್ಟಿಗೆ ಹೊರೆ 1ಕ್ಕೆ | .. | .. | 0—0—1 |
| 3. | ಹುಲ್ಲುಹೊರೆ 1ಕ್ಕೆ | .. | .. | 0—0—2 |
| 4. | ತರಕಾರಿ ಅಂಗಡಿ ಜಾಗಾಕ್ಕೆ | .. | .. | 0—0—2 |
| 5. | ಕುಂಬಾರರು ಸಾಮಾನ ಮಂಕ್ರಿ 1ಕ್ಕೆ | .. | .. | 0—0—2 |
| 6. | ವಿಗೈರೆ ವಗ್ಯೆರೆ ಅಂಗಡಿ 1ಕ್ಕೆ | .. | .. | 0—0—2 |

3. ಧರಖಾಸ್ತುಗಳ ಮೇಲ್‌ಭಾಗದಲ್ಲಿ "ತಾರಾಮಂಡಲ ಪೇಟೆ ನಾಲ್ಕು ಭಾವಿ ಬಳಿಯಣ ಖಾಲಿ ಜಮೀನಿನಲ್ಲಿ ಕಟ್ಟಿಗೆ ಮತ್ತು "ಹುಲ್ಲುಭಂಡಿ ವಗ್ಯೆರೆ ಇಟ್ಟುಕೊಂಡು ಮಾರುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರ್ಯಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅಮಾನತ್ತು ಇಡಬೇಕು.

7. ಕಂಟ್ರ್ಯಾಕ್ಟುದಾರನು ಅವನ ಕಂಟ್ರ್ಯಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೇ ತಾರೀಖು ವಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಸೀತಿ ಪಡೆಯುತ್ತಾ ಬರಬೇಕು. ಕಂಟ್ರ್ಯಾಕ್ಟುದಾರನು ಅವನ ಕಂಟ್ರ್ಯಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರ್ಯಾಕ್ಟು ಮಂಜೂರಾದ 7 ದಿವಸದ ಒಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರ್ಯಾಕ್ಟುದಾರನು ತನ್ನ ಕಂಟ್ರ್ಯಾಕ್ಟು ಆಖೈರಾಗುವವರಿಗೂ ಕಂಟ್ರ್ಯಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ವುಳಿಕೊಳ್ಳಲ್ಪಡುವದು. ಇವನ ಕಂಟ್ರ್ಯಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರ್ಯಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರ್ಯಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರ್ಯಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್‌ಸೇಷನ್ ಅಪೇಕ್ಷಿಸದೆ ಕಂಟ್ರ್ಯಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರ್ಯಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗೈರೆ ಭಂಡಿಗಳೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆ ಹೊರೆಗಳೆ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರ್ಯಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರ್ಯಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರ್ಯಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತು ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರ್ಯಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ್ ತಕರಾರು ತೆಗೆದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

---

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟೌನ್ ಮಜಕೂರಿನಲ್ಲಿರತಕ್ಕ ಅಂದರೆ, ಮಾಮೂಲ್ ಅನುಸರಿಸಿ ಮಾಫಿ ನಡಿಯತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಶೇರಿದ ತೆಂಗಿನ ಮರಗಳ ಫಸಲ್ ಪೈಕಿ ಆಯಾಯ ಮನೆ ಅಥವಾ ಅಂಗಡಿ ಮಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೆ ಜಾತಾ ಉಳಿದ ಅರ್ಧ ಹಿಸ್ಸೆ ಫಸಲನ್ನು 1903ನೇ ಇಸವಿ ಜುಲೈ ಗುರ್ರೇ ಲಾಗಾಯತು 1904ನೇ ಇಸವಿ ಜೂನ್ ಆಖೈರುವರಿವಿಗೂ ಒಂದು ಸಾಲ್ ಪೂರ್ತಿ ರೂಢಿಸಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಷಹರ್ ಮಜಕೂರಿಗೆ ಶೇರಿದ ತೆಂಗಿನ ಫಸಲು ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲೀ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು ಮತ್ತು ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಮಂಜೂರಾದ ದರಖಾಸ್ತುದಾರನು ಆತನ ದರಖಾಸ್ತು ಮಂಜೂರಾದ ಸಂಗತಿಯನ್ನ ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಕಂಟ್ರ್ಯಾಕ್ಟಿನ ವಿಶಿಷ್ಟ ಹಣವನ್ನು ಹಾಜರ್ಮಾಡಿ ಕಂಟ್ರ್ಯಾಕ್ಟನ್ನು ಸರಿಯಾಗಿ ನೆರವೇರಿಸುತ್ತೇನೆಂಬುವದಕ್ಕೆ ಛಾಪಾ ಕಾಗದ್ದಲ್ಲಿ ಇಜಾರೆ ಮುಚ್ಚಳಿಕೆಯನ್ನ ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣಿ ಹಣವು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಆಗುವ ಲುಕ್ಸಾನಿಗೆ ಅವನು ಗುರಿಯಾಗುತ್ತಾನೆ. ಈಗ ಇರತಕ್ಕ ಮರಗಳ ಪೈಕಿ ಪಬ್ಲಿಕ್ ಅನುಕೂಲತೆ ಬಗ್ಗೆ ಆಗಲಿ ಅಥವಾ ಇನ್ಯಾವ ಕಾರಣದಿಂದಾಗಲಿ ಮರಗಳನ್ನ ಕಡಿಸಿದಲ್ಲಿ ಆ ಬಗ್ಗೆ ಯಾವ ಲುಕ್ಸಾನು ಕೇಳತಕ್ಕದ್ದಲ್ಲ.

6. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣವು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

---

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮಜಕೂರು ತರ್ಕಾರಿ ಮಾರ್ಕೆಟ್ಟು ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದಲ್ಲಿ ಭಂಡಿಗಳು ನಿಲ್ಲುವದಕ್ಕೆ ಹದ್ದು ಮಾಡಿ ಇರುವ ಸ್ಥಳದಲ್ಲಿ ಬಂದು ನಿಲ್ಲುವ ಕಲ್ಲು ಭರ್ತಿ ಪ್ರತಿ ಭಂಡಿಗೂ 1903ನೇ ಇಸವಿ ಜುಲೈ ಗುರ್ರೇ ಲಾಗಾಯತು 1904ನೇ ಇಸವಿ ಜೂನ್ ಆಖೈರ್ ವರಿಗೂ ರೋಜೀನಾ ದರ ಭಂಡಿ 1ಕ್ಕೆ 0—0—6 ಆರು ಪೈ ಮ್ಯಾರಿಗೆ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಅದರಲ್ಲಿ ಬೀಳುವ ಕಚರಾವನ್ನು ರೂಢಿಸಿಕೊಳ್ಳುವದಕ್ಕೂ ಸಹ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು ಸದರೀ ಸ್ಥಳದ ಪ್ಲಾನ್ ಮ್ಯುನಿಸಿಪಲ್ ಆಫೀಸಿನಲ್ಲಿ ನೋಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮಜಕೂರು ತರ್ಕಾರಿ ಮಾರ್ಕೆಟ್ಟು ಮುಂಭಾಗದಲ್ಲಿ ಕಲ್ಯಾಣಿ ಇದ್ದ ಬೈಲು ಜಮೀನಿನಲ್ಲಿ ಕಲ್ಲುಭಂಡಿ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಕಚರಾ ರೂಢಿಸಿಕೊಳ್ಳುವದಕ್ಕೂ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು; ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅಮಾನತ್ತು ಇಡಬೇಕು.

6. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೇ ತಾರೀಖು ವಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟುಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

9. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

10. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಭಂಡಿ ಬಾರದೇ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನು ದೊರಿಯಲಾರದು.

11. ಪ್ರೆಸಿಡೆಂಟ್ ಸಾಹೇಬರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕಮಿ ಕಂಟ್ರಾಕ್ಟು ವಗ್ಯೆರ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

12. ಇವುಗಳ ಪೈಕಿ ಯಾವ ಷರತ್ತಿಗಾಗಲಿ ತಪ್ಪಿಕೊಂಡರೆ ತಕ್ಷಣ ಕಂಟ್ರಾಕ್ಟನ್ನ ಬೇರೆ ಜನರಿಗೆ ಕೊಟ್ಟು ಲುಕ್ಸಾನು ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಗುರಿಮಾಡುವದಲ್ಲದೆ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

---

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮಜಕೂರು ಕಸಾಯಿ ಮಾರ್ಕೆಟ್ಟಿನಲ್ಲಿ ರೋಜೀನಾ ಸಾಯಂಕಾಲದ ವ್ಯಾಳೆ ಕಟಾವು ಆಗುವ ಕುರಿ ಅಥವಾ ಮೇಕೆ ರಾಸ್ 1ಕ್ಕೆ 0—2—0 ಎರಡು ಆಣೆ ಮ್ಯಾರಿಗೆ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1904ನೇ ಇಸವಿ ಜೂನ್ ಆಖೈರ ಮಿನಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತು

ಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ ಸನ್ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಮ್ಯುನಿಸಿಪಲ್ ಸ್ಲಾಟರ್ ಹೌಸಿನ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಒಂದು ತಿಂಗಳ ಕಂಟ್ರಾಕ್ಟು ಮೊಬಲಗು ಅಮಾನತ್ತು ಇಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಇಜಾರೆ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ತಪ್ಪಿದರೆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ವುಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಸ್ಲಾಟರ್ ಹೌಸನ್ನ ಸಾಕ್ ಮಾಡಿಸಲು ನೇಮಿಸಲ್ಪಡುವ ಎಸ್ಟಾಬ್ಲಿಷ್‌ಮೆಂಟ್ ಛಾರ್ಜಿಗಾಗಿ ಮಾಹೆಯಾನ 25 ರೂಪಾಯಿ ಮೇರಿಗೆ ಹರಯೇಕ್ ತಿಂಗಳು 5ನೇ ತಾರೀಖು ಒಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ್‌ಹೌಸಿನಲ್ಲಿ ಬೀಳುವ ಕಚರಾ, ಕಂಟ್ರಾಕ್ಟುದಾರ್ರಿಗೆ ಶೇರತಕ್ಕದ್ದಿಲ್ಲಾ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮತ್ತು ಎಸ್ಟಾಬ್ಲಿಷ್‌ಮೆಂಟ್ ಛಾರ್ಜನ್ನ ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡಿಯಬೇಕಾಗಿಧೆ.

8. ಅಮಾನತ್‌ನಲ್ಲಿ ಇಡಲ್ಪಟ್ಟ ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟ್ ಆಖೈರ್ ಆಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ ಉಳಿಸಿಕೊಳ್ಳಲ್ಪಡುವದು ಇವನ ಕಂಟ್ರಾಕ್ಟ್ ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರವರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನ ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸದರೀ ಸ್ಲಾಟರ್ ಹೌಸನ್ನ ಕಂಟ್ರಾಕ್ಟು ಕಾಲದಲ್ಲಿ ಬ್ಯಾರೆ ಸ್ಥಳಕ್ಕೆ ವರ್ಗ ಮಾಡಿದ್ರೇ ಆದರೆ ಬಿನ್ ತಕರಾರ್ ಅಲ್ಲಿಗೆ ಹೋಗಬೇಕು.

11. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು, ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸ್ ಏರ್ಪಾಡು ಇಡತಕ್ಕದ್ದು.

12. ಮಾರ್ಕೆಟ್‌ಷೋ ಎಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಅದಕ್ಕೆ ಹಿಂದಿನ ದಿನ ಸ್ಲಾಟರ್ ಹೌಸಿನಲ್ಲಿ ಮಾರ್ಕೆಟ್‌ಷೋಗೋಸ್ಕರ ಕಟಾವಾಗುವ ಕುರಿಗಳು ಅಥವಾ ಮೇಕೆಗಳ ಮೇಲೆ ರುಸುಂ ವಸೂಲ್ಮಾಡಕೂಡದು. ಈ ನಷ್ಟಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

13. ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡದುಕೊಂಡರೂ ಮೇಲಿನ ರೇಟಿಗಿಂತ ಜಾಸ್ತಿಯಾಗಿಯೂ ಮತ್ತು ಸ್ಲಾಟರ್ ಹೌಸ್ ವಿನಹ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೂಡ್ಲೆ ಕಂಟ್ರಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರ್ರನ್ನ ಜವಾಬ್ದಾರನನ್ನಾಗಿಮಾಡಿ ಅವನ ಸ್ಥಿರ ಚರ ಜಿಂದಗಿ ಜಪ್ತು ಮಾಡಿ ಲುಕ್ಸಾನ್ ವಸೂಲ್ಮಾಡಲ್ಪಡುತ್ತೆ.

---

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸಿಟಿ ಮಜಕೂರ್ ತರಕಾರಿ ಮಾರ್ಕೆಟ್ ಮುಂಭಾಗದಲ್ಲಿ ಕಲ್ಯಾಣಿ ಬಳಿ ಮೈದಾನದ ಜಮೀನಿನಲ್ಲಿ ಕಬ್ಬು, ಹುಲ್ಲು ವಗ್ಯೆರೆ ವ್ಯಾಪಾರ ಮಾಡತಕ್ಕವರಿಂದ 1903ನೇ ಇಸವಿ ಜುಲೈ ಗುರ್ರೇ ಲಾಗಾಯತು 1904ನೇ ಇಸವಿ ಜೂನ್ ಆಖೈರ್ ವರಿಗೆ ಈ ಕೆಳಗೆ ತೋರಿಸಿ ಇರುವ ದರಗಳ ಅನುಸರಿಸಿ ರೋಜೀನ ರುಸುಂ ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ದಿವಿ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಕಬ್ಬು ಮತ್ತು ಹುಲ್ಲಂಗಡಿ ರುಸುಂ ದರಖಾಸ್ತು" ಎಂಬದಾಗಿ ಬರದಿರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣಿ ಮೊಬಲಗನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲಾ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕು ಅಥವಾ ಸಬಬ್ ಇಲ್ಲದೆ ನಿರಾಕರಿಸುವದಕ್ಕು ಸಹ ಈ ಕೆಳಗೆ ಸೈನ್ ಮಾಡಿರುವವರು ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ ಒಂದು ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನ ಕೂಡ್ಲೆ ಹಾಜರ್ಮಾಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಮುಚ್ಚಳಿಕೆಯನ್ನು ಬರೆದುಕೊಡಬೇಕು.

6. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಸೀತಿ ಪಡೆಯಬೇಕು.

7. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರ್ ಆಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಿಮೆ ವಿಷಯಗಳನ್ನು ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

9. ಸದರೀ ಸ್ಥಳವನ್ನ ಬೋರ್ಡಿನವರು ಯಾವ ಕಾಲದಲ್ಲಿ ಬಿಟ್ಟುಕೊಡಬೇಕೆಂದು ಅಪೇಕ್ಷಿಸುತ್ತಾರೆಯೋ ಆಗ ಬಿಲ್ ತಕರಾರ್ ಕಂಪೆನ್ಸೇಷನ್ ವಗೈರೆ ಏನೂ ಕೇಳದೆ ಬಿಟ್ಟುಕೊಡಬೇಕು.

10. ರುಸುಂ ವಸೂಲ್ಮಾಡಿಕೊಳ್ಳತಕ್ಕ ರೇಟ್ ತಪಶೀಲ್

| | | ರೂ. ಆ. ಪೈ. |
|---|---|---|
| 1. | ಚದುರ 10 ಅಡಿ ವುಳ್ಳ ಕಬ್ಬಿನ ಅಂಗಡಿ 1ಕ್ಕೆ .. ... | 0—0—4 |
| 2. | ಕಬ್ಬಿನ ಭಂಡಿ 1ಕ್ಕೆ ... ... ... | 0—1—0 |
| 3. | ಚದುರ 5 ಅಡಿ ಅಥವಾ ಅದಕ್ಕೆ ಕಮ್ಮಿ ವಿಸ್ತೀರ್ಣವುಳ್ಳ ಪ್ರತಿ ಕೊರಚರ ಅಂಗಡಿ 1ಕ್ಕೆ | 0—0—2 |
| 4. | ಹುಲ್ಲುಹೊರೆ 1ಕ್ಕೆ ... ... ... | 0—0—2 |
| 5. | ಚದುರ 15 ಅಡಿ ಅದಕ್ಕೆ ಕಮ್ಮಿ ವಿಸ್ತೀರ್ಣವುಳ್ಳ ಕುಂಬಾರ್ರ ಅಂಗಡಿ 1ಕ್ಕೆ ... | 0—0—6 |
| 6. | ಒಟ್ಟಾಗಿ ಒಣಗಿದ ಹುಲ್ಲು ಒಣವಿ ಹಾಕಿರುವ ಒಂದು ಭಾಗದ ಜಮೀನಿನಲ್ಲಿ ಮಾರಾಟ | 5—0—0 |

ಮಾಡತಕ್ಕ ಬಗ್ಯೆ ಒಣಗಿದ ಹುಲ್ಲು ಜಮಾವಣಿ ಮಾಡಿಕೊಳ್ಳಲು ಮಾಹೇಯಾನಾ.

11. ಮೇಲೆ ನಮೂದು ಮಾಡಿರುವ ಷರತ್ತಿನ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡದುಕೊಂಡರೂ ಇದರ ಕೆಳಗೆ ನಮೂದಾಗುವ ರೇಟಿಗಿಂತ ಜಾಸ್ತಿಯಾಗಿ ರುಸುಂ ವಸೂಲ್ಮಾಡಿಕೊಂಡರು ಮತ್ತು ಡಿಟೋ ಸ್ಥಳ ವಿನಹ ಇತರ ಯಾವ ಸ್ಥಳಗಳಲ್ಲಿಯಾಗಲಿ ರುಸುಂ ವಸೂಲ್ಮಾಡಿಕೊಂಡರು ಕೂಡ್ಲೆ ಕಂಟ್ರಾಕ್ಟನ್ನು ರದ್ದುಮಾಡಿ ಬ್ಯಾರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬುದಾರನನ್ನಾಗಿ ಮಾಡಿ ಅವನ ಜಿಂದಗಿ ಜಫ್ತಿ ಮೂಲಕ ವಸೂಲ್ಮಾಡಲ್ಪಡುತ್ತೆ.

12. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿಲ್ ತಕರಾರ್ ತಗದುಕೊಳ್ಳಲು ಸಲೀಸ್ ಏರ್ಪಾಡು ಇಡತಕ್ಕದ್ದು.

---

ತಾರೀಖು 16ನೇ ಮೇ 1903.

## ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟೌನ್ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚರಾವನ್ನ ಇದರೊಡನೆ ಜಂಟಿಸಿರುವ ಪಟ್ಟೀ ಮೇರಗೆ ರೂಢಿಸಿಕೊಳ್ಳುವ ಬಗ್ಯೆ ಸನ್ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1904ನೇ ಇಸವಿ ಜೂನ್ ಆಖೈರ್ ವಿನಹು ಇದರಡಿ ಕಂಡಿರುವ ಷರತ್ತುಗಳನ್ನ ಅನುಸರಿಸಿ ಜೂನ್ 16ನೇ ತಾರೀಖು ಮಂಗಳವಾರ ದಿವಿ 2 ಘಂಟೆಗೆ ಬೋರ್ಡಿನ ಅಫೀಸಿನಲ್ಲಿ ಹರಾಜು ಮಾಡಲ್ಪಡುತ್ತಾಗಿ ಇದನ್ನ ದರಖಾಸ್ತು ಮಾಡಿ ತೆಗದುಕೊಳ್ಳತಕ್ಕ ಇಷ್ಟವುಳ್ಳವರು ಹಾಜರಾಗಿ ಸವಾಲ್ಮಾಡಿ ತೆಗದುಕೊಳ್ಳಬಹುದು. ಖಡಸವಾಲ್ದಾರನ ಸವಾಲ್ ಖೈದಾದ ಕೂಡ್ಲೆ ಶೇಕಡಾ 25 ರೂಪಾಯಿ ಮೇರಗೆ ಆಗುವ ಮೊಬಲಗನ್ನ ಡಿಪಾಜಿಟ್ ಹಾಜರ್ಮಾಡಬೇಕು. ತಪ್ಪಿದಲ್ಲಿ ಸದರೀ ಸವಾಲ್ ಕ್ಯಾನ್ಸಲ್ಮಾಡಲ್ಪಟ್ಟು ಬಾಬು ಪುನಹ ಹರಾಜ್ ಮಾಡಿಸುವದರಲ್ಲಿ ಉಂಟಾಗುವ ಲುಕ್ಸಾನು ಅವ್ವಲ್ ದರಖಾಸ್ತುದಾರನಿಂದಲೇ ವಸೂಲ್ಮಾಡಲ್ಪಡುತ್ತೆ. ಎಲ್ಲಾ ಸವಾಲ್‌ಗಿಂತ ಹೆಚ್ಚಾದ ಅಥವಾ ಇನ್ಯಾವ ಸವಾಲನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನು ತೋರಿಸದೆ ಯಾವ ಸವಾಲನ್ನೇ ಆಗಲಿ ನಿರಾಕರಿಸಬಹುದು.

## ಷರತ್ತುಗಳು.

1. ಆಯಾಯ ಡಿವಿಜನ್‌ಗೆ ಸೇರಿದ ರೋಡುಗಳಲ್ಲಿಯೂ, ಗಲ್ಲಿಗಳಲ್ಲಿಯೂ ಸಹ ಸ್ವೀಪರ್‌ಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮತ್ತು ರಸ್ತೆ ಬಾಜೂದಲ್ಲಿ ಜಮಾಯಿಸಲ್ಪಡುವ ಕಚರಾವನ್ನು, ಮಳೆಕಾಲದಲ್ಲಿಯೂ ಬೇಸಿಗೆಕಾಲದಲ್ಲಿಯೂ ಸಹ ಬೆಳಿಗ್ಯೆ 5 ಘಂಟೆ ಲಾಗಾಯಿತು 9 ಘಂಟೆ ವರಿಗೂ, ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರಿಗೂ ಒಂದು ದಿನವೂ ತಪ್ಪದೆ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಆಯಾಯ ದಿವಸವೇ ಟೌನ್ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೀನಾ ಹೆಲ್ತ್ ಆಫಿಸರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ್ಮಾನೆ ಕೊಡುವದಕ್ಕೆ ಬದ್ಧರಾಗಿರಬೇಕು. ಮತ್ತು ಆ ಪ್ರಕಾರ ಕಚರಾವನ್ನು ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನು ಇಡಿಸಿ ಮ್ಯುನಿಸಿಪಲ್ ಅಧಿಕಾರಸ್ಥರು ತೆಗದು ಹಾಕುವದಕ್ಕೆ ತಗಲುವ ಲಾಗವಡು ಎಷ್ಟು ಆಗುತ್ತದೆಯೋ ಅದನ್ನು ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಭಾಗದ ಸರಹದ್ದಿನಲ್ಲಿ ಮ್ಯುನಿಸಿಪಲ್ ಮಾರಿಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನು ಪ್ರತಿ ದಿನವೂ ಸಾಗಿಸತಕ್ಕ ಬಗ್ಯೆ ಹಾಲಿ ಗೊತ್ತಾಗಿರುವ ಮತ್ತು ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನು ಪ್ರತಿ ದಿವಸವೂ ಖಯಿಂದ ನೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಅಥವಾ ಕೆಲವು ಸ್ಪೆಷಿಯಲ್ ಕೇಸುಗಳಲ್ಲಿ ತಲಬು ಮಾಡಿದವ್ಯಾಳೆ ಸಾಗಿಸಿಕೊಂಡು ಪಾಕ್ ಮಾಡಿಸುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೇ ಕಲಂನಲ್ಲಿ ಗೊತ್ತು ಮಾಡಿರುವ ಮೇರಿಗೆ ಜುರ್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಒಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಂಡಿಮುಕ್ಕರಿಗಳಲ್ಲಿ ಮೊದಲು ಕಚರಾ ಹಾಕಿ ಮಧ್ಯದಲ್ಲಿ ಪಾಯಿಖಾನೆ ಗೊಬ್ಬರ ಭರ್ತಿಮಾಡಿ ಅದರಮೇಲೆ ಪುನಹ ಕಸ ಹಾಕಿ ಅದರ ದುರ್ಗಂಧ ಹೊರಗೆ ಬಾರದಂತೆಯೂ, ದಾರಿಗಳಲ್ಲಿ ಚೆಲ್ಲದಂತೆಯೂ ಮುಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು. ಮತ್ತು ಮುಕ್ಕರಿಯ ಕಸದಮೇಲೆ ಚಾಪೆಯಿಂದ ಕಾಣದಂತೆ, ಮುಚ್ಚಿ ಇರಬೇಕು.

4. ಭಂಡಿಗಳು ಮತ್ತು ಅವುಗಳ ಮೇಲೆ ಇಡತಕ್ಕ ಭಂಡಿಮುಕ್ಕರಿಗಳೂ ಸಹ ದೊಡ್ಡವಾಗಿಯೂ ಮಜಬೂತಾಗಿಯೂ, ಸಗಣಿಯಿಂದ ಸಾರಿಸಲ್ಪಟ್ಟವಂಥವಾಗಿಯೂ ಇರಬೇಕು. ಎತ್ತುಗಳು ಎಳೇಪ್ರಾಯವುಳ್ಳವಾಗಿ ಧೃಢವಾಗಿ ಇರಬೇಕು.

5. ದರಖಾಸ್ತು ಮಂಜೂರಾದ ನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ನಾಲ್ಕು ಖಿಸ್ತಿನಲ್ಲಿ ಅಂದರೆ 1ನೇ ಖಿಸ್ತು 1903ನೇ ಇಸವಿ ಸೆಪ್ಟಂಬರ ಆಖೈರ್ ವರಿಗಿನದು 1903ನೇ ಜುಲೈ 1ನೇ ತಾರೀಖಿನಲ್ಲಿಯೂ, 2ನೇ ಖಿಸ್ತು 1903ನೇ ಇಸವಿ ಡಿಸೆಂಬರ ಆಖೈರ್ ವರಿಗಿನದು 1903ನೇ ಇಸವಿ ಅಕ್ಟೋಬರ 1ನೇ ತಾರೀಖಿನಲ್ಲಿಯೂ, 3ನೇ ಖಿಸ್ತು 1904ನೇ ಮಾರ್ಚಿ ಆಖೈರ್ ವರಿಗಿನದು 1904ನೇ ಇಸವಿ ಜನವರಿ 1ನೇ ತಾರೀಖಿನಲ್ಲಿಯೂ, 4ನೇ ಖಿಸ್ತು 1904ನೇ ಜೂನ್ ಆಖೈರುವರಿಗಿನದು 1904ನೇ ಏಪ್ರೆಲ್ 1ನೇ ತಾರೀಖಿನಲ್ಲಿಯೂ ತಪ್ಪದೆ ಅಡ್ವಾನ್ಸಾಗಿ ಹಾಜರ್ಮಾಡಿ ರಸೀದಿ ಪಡದುಕೊಳ್ಳಬೇಕು. ಈರೀತಿ ಮೊಬಲಗ ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಒಟ್ಟು ಮೊಬಲಗನ್ನು ಒಂದೇ ಗಂಟನಲ್ಲಿ ಡಿಮ್ಯಾಂಡ್ ಮಾಡಿದ ಒಡನೇ ಬಿನ್ ತಕರಾರ್ ಪಾವತಿ ಮಾಡಬೇಕು. ಇದಕ್ಕಾಗಿ ಸ್ಟ್ಯಾಂಪು ಕಾಗದ್ದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಎಲ್ಲಾ ಷರತ್ತುಗಳನ್ನು ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು. ಈ ಷರತ್ತುಗಳ ಪೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡದುಕೊಂಡರೆ ಆ ಕೂಡ್ಲೆ ಅವನ ಕಂಟ್ರಾಕ್ಟನ್ನು ರದ್ದು ಮಾಡಿ ಬೇರೆ ಜನರಿಗೆ ಕಂಟ್ರಾಕ್ಟ್ ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವಲ್ ಕಂಟ್ರಾಕ್ಟುದಾರನನ್ನು ಗುರಿಮಾಡಿ ಜಫ್ತಿ ಹರಾಜ್ ಮೂಲಕ/ಹಣ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಕಡಿಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟುಕಾಲದಲ್ಲಿ 1ನೇ ಷರತ್ತಿನಲ್ಲಿ ಕಂಡಂತೆ ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಅಥವಾ ಖರ್ಚುಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ಪೂರಾ ಅಥವಾ ವುಳಿದದ್ದು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

9. ಗೊಬ್ಬರದ ಭಂಡಿಗಳಿಗಾಗಿ ಮಾಫೀ ಪ್ಯಾಸುಗಳು ದೊರೆಯಲಾರವು. ಟೋಲ್ ಗೇಟುಗಳಲ್ಲಿ ಈ ಸಿಟಿಗೆ ಸೇರಿ ಲೈಸೆನ್ಸು ಪಡೆಯದೆ ಇರುವ ಭಂಡಿಗಳು ಬಂದರೆ ಅವುಗಳಿಗಾಗಿ ಟೋಲ್ ಪಾವತಿ ಮಾಡಬೇಕು.

| ನಂಬರ. | ಡಿವಿಜನ್. | ಬ್ಲಾಕ್. | ರೋಡುಗಳ ತಪಶೀಲ್ ಮತ್ತು ಚಕ್ಕುಬಂದಿ. |
|---|---|---|---|
| 1 | I | ,, | 1ನೇ ಡಿವಿಜನ್ ನಾರದರ್ನ್ ಎಕ್ಸ್‌ಟೆನ್‌ಷನ್ ಮಲ್ಲೇನಹಳ್ಳಿ. ಪಿಂಡಾರ್‌ಚೆರಿ ಎಲ್ಲಾ ಸಬರ್ಬನ್ ರೋಡುಗಳು ಗುಟ್ಟಹಳ್ಳಿ, ಮುನಿರಡ್ಡಿಪಾಳ್ಯ ವಗೈರೆ ಡಿವಿಜನಿಗೆ ಸೇರಿದ ಎಲ್ಲಾ ಭಾಗಗಳು ರಾತ್ರಿ ಕಾಲದಲ್ಲಿ ಹಾಲಿ ಎತ್ತುತ್ತಿರುವ ಮುಂದೆ ಎತ್ತಲ್ಪಡುವ ಬಂಗ್ಲೆಗಳ ಪಾಯಿಖಾನೆ ವಿನಹ. |
| 2 | II | 1 | ಕಿಚ್ಚೆಶೆಟ್ಟಿ ಛತ್ರದ ರೋಡು ಸೇರಿ ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕದ ವರಿಗೆ, ಅಲ್ಲಿಂದ ಗುಡುಮೈಯ್ಯನ ಪೇಟೆ ದೊಡ್ಡರೋಡ್‌ನಿಂದ ಬಳೇಪೇಟೆ ರೋಡಿನವರಿಗೆ, ಮತ್ತು ಉತ್ತರಕ್ಕೆ ಸುಬೇದಾರ್ ಛತ್ರ ರೋಡ್ ಆಖೈರು ವರಿಗೆ. ಈ ಮಧ್ಯೆ ಇರುವ ಬೀದಿಗಳು ಗಲ್ಲಿಗಳು. |
| 3 | ,, | 2 | ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಜಹಗೀರ್‌ದಾರ ಮನೆ ಚವುಕ ಬಳೇಪೇಟೆ ಗುಡುಮೈಯ್ಯನ ಪೇಟೆ ರೋಡ್ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು. |
| 4 | ,, | 3 | ತಾಲ್ಲೂಕು ಕಚೇರಿ ರೋಡ್ ಬಳೇಪೇಟೆ ಚವುಕದ ಮೊದಲು ಮದರಾಸ್ ಗೂಡ್ಸ್ ಗೇಟ್ ವರಿಗೆ ಅಲ್ಲಿಂದ ರೈಲ್ವೆ ಸ್ಟೇಷನ್ ಸ್ಟಾಫ್ ಕ್ವಾರ್ಟರ್ಸ್ ವಗೈರೆ ಕಕ್ಕಸಗಳು ಮತ್ತು ಮನೆಗಳು ಧರ್ಮಾಂಬುಧಿಕೆರೆ ಸುತ್ತಲೂ ರೋಡ್ ಹಳೆ ಸವಾರ ಲೈನಿಗೆ ಸೇರಿದ ಪೊಲೀಸ್ ಸ್ಟೇಷನ್ ವಗೈರೆ, ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು. |
| 5 | III | 1 | ಮಾರ್ಕೆಟ್ ಚವುಕದ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಮುಟ್ಕಲ್ ರೋಡ್‌ವರಿಗೂ, ಅಲ್ಲಿಂದ ಮ್ಯುನಿಸಿಪಲ್ ಸ್ಕೂಲ ಬಳಿ ಚವುಕದಿಂದ ಮಾರ್ಕೆಟ್ ಚವುಕದವರಿಗೆ, ಈ ಮಧ್ಯೆ ಗುಂಡೋಪಂತರ ರೋಡ್ ತರಗಿನಪೇಟೆ, ಮಾಮೂಲಿ ಪೇಟೆ ರಸ್ತೆಗಳು, ಒಳಗಲ್ಲಿಗಳು. |
| 6 | ,, | 2 | ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದ ಮೊದಲು ಪೊಲೀಸ್ ರೋಡ್ ಅಕ್ಕಿಪೇಟೆ ರೋಡ್ ವರಿಗೂ, ಅಲ್ಲಿಂದ ಅಕ್ಕಿಪೇಟೆ ರೋಡ್ ಅನಾಮತ್ತು ತಾಲ್ಲೂಕು ಕಚೇರಿ ರೋಡ್ ರಾಘವಾಚಾರ್ಲು ಮನೆಬಳಿ ಚವುಕದಿಂದ ತಾಲ್ಲೂಕು ಕಚೇರಿ ರೋಡ್ ಮುಟ್ಕಲ್ಲು ರೋಡ್ ಚವುಕದ ವರಿಗೂ, ಈ ಮಧ್ಯೆ ಇರುವ ಜಂಖಾನಪೇಟೆ, ಸುಲ್ತಾನ್‌ಪೇಟೆ, ಸಂತೂಸಾಪೇಟೆ, ಮನವಾರ್ತೆಪೇಟೆ ರೋಡ್‌ಗಳು, ಗಲ್ಲಿಗಳು. |
| 7 | ,, | 3 | ಪೊಲೀಸ್ ರೋಡ್ ಅಕ್ಕಿಪೇಟೆ ಚವುಕದ ಲಾಗಾಯಿತು ತೋಟದ್ದೇವರ ಮಠದ ವರಿಗೂ, ಅಲ್ಲಿಂದಾ ಫ್ಲೌರ್‌ಮಿಲ್ ಟ್ಯಾಂಕ್ ಬಂಡ್ ರೋಡ್ ಮೈಸೂರು ರೈಲ್ವೆ ಗೂಡ್ಸ್‌ಗೇಟ್ ತಾಲ್ಲೂಕ್ ಕಚೇರಿ ರೋಡ್ ಅಕ್ಕಿಪೇಟೆ ಚವುಕದವರಿಗೆ. ಈ ಮಧ್ಯೆ ಇರುವ ಗಾರ್ಡನ್‌ಪೇಟೆ, ಅರಳೇಪೇಟೆ, ಅಕ್ಕಿಪೇಟೆ ಗಲ್ಲಿಗಳು, ರಸ್ತೆಗಳು. |
| 8 | ,, | 4 | ತರಕಾರಿ ಮಾರ್ಕೆಟ್ ಬಳಿ ಆಸ್ಪತ್ರೆ ಮೊದಲು ಮೈಸೂರು ರೋಡ್ ಬಾರ್‌ಲೈನ್‌ವರಿಗೂ, ಅಲ್ಲಿಂದ ಕೆಂಗೇರಿ ಬಾಗಲ್ ಪೊಲೀಸ್ ಸ್ಟೇಷನ್‌ವರಿಗೆ, ಸ್ಟೇಷನ್ನಿಂದ ರಾಣಾಸಿಂಗನ ಪೇಟೆ ಜೇಲ್. ಈ ಮಧ್ಯೆ ಇರುವ ರಸ್ತೆಗಳು, ಗಲ್ಲಿಗಳು ಮತ್ತು ಹಳೇ ಬಾರ್ ಲೈನ್ ಬಾಜೂ ಇರುವ ಪೆನ್‌ಷನ್ ಲೈನ್, ಚಲವಾದಿ ಪಾಳ್ಯ ವಗೈರೆ. |
| 9 | IV | 1 | ಹಲಸೂರು ಗೇಟ್ ಪೊಲೀಸ್ ಸ್ಟೇಷನ್ ಮೊದಲು ತಾಲ್ಲೂಕ್ ಕಚೇರಿ ರೋಡ್ ನಗರ್ತರಪೇಟೆ ಅಣ್ಣೈಯಪ್ಪ ಶೆಟ್ಟರ ಮನೆವರಿಗೂ, ಅಲ್ಲಿಂದಾ ಉತ್ತರಕ್ಕೆ ಸೈಬಶೆಟ್ಟರ ಗಲ್ಲಿಯಿಂದಾ ಜುಮ್ಮಾ ಮಸೀತಿ ಮುಂಭಾಗದಿಂದ ನಾರಾಯಣಶೆಟ್ಟಿ ಪೇಟೆ ರೋಡ್ ಸೇರಿ ಕಬ್ಬನ್‌ಪೇಟೆ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ, ಅಲ್ಲಿಂದಾ ಕಬ್ಬನ್‌ಸಾಬರಪೇಟೆ ರೋಡ್ ಸೇರಿ ಹಲಸೂರು ಗೇಟಿನ ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು. |
| 10 | ,, | 2 | ನಗರ್ತರಪೇಟೆ ಅಣ್ಣೈಯಪ್ಪಶೆಟ್ಟರ ಮನೆ ಲಾಗಾಯಿತು ದೊಡ್ಡಪೇಟೆ ಚವುಕ ಅವಿನ್ಯೂ ರೋಡ್ ಸೇರಿ ಎಲಹಂಕದ ಬಾಗಲ್ ಪೊಲೀಸ್ ಸ್ಟೇಷನ್‌ವರಿಗೂ, ಅಲ್ಲಿಂದ ಡಿಸ್ಟ್ರಿಕ್ಟ್ ಆಫೀಸ್ ರೋಡ್ ಸೆನಟೂಫ್ ಕಬ್ಬನ್‌ರೋಡ್ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ, ಈ ಮಧ್ಯೆ ಇರುವ ಚವುಡೇಶ್ವರಿ ರೋಡ್ ಪಾಂಚಾಳದಪೇಟೆ ಮಕ್ಕಳು ಬಸವಣ್ಣನ ಗುಡಿ ರೋಡ್ ಕವಾಡಿ ರೇವಣ್ಣನಪೇಟೆ ರಸ್ತೆಗಳು, ಗಲ್ಲಿಗಳು. |

| ನಂಬರ್. | ಡಿವೀಜನ್. | ಬ್ಲಾಕ್. | ರೋಡ್‌ಗಳ ತಪಶೀಲ್ ಮತ್ತು ಚಕ್ಕು ಬಂದಿ. |
|---|---|---|---|
| 11 | V | 2 | 5ನೇ ಡಿವಿಜನ್ ಮಾಮೂಲ್ ಮೇರಿಗೆ. |
| 12 | VI | 1 | ಮಾರ್ಕೆಟ್ ಚವುಕದ ಮೊದಲು ಬೊಂಬು ಬಜಾರ್ ರೋಡ್, ಮಿಷನ್‌ರೋಡ್, ಲಾಲ್‌ಬಾಗ್ ರೋಡ್, ಬ್ಯಾಟಪ್ಪನ ತೋಪುನಿಂದ ಬಿಳಿಕ್ಕಿಭಾವಿ ಬಳಿ ಗಲ್ಲಿಯಿಂದ ಮಾವಳ್ಳಿ, ಕೆರೆಕಟ್ಟೆ, ಕಲಾಸಿ ರೋಡ್, ಹಳೇ ಪೊಲೀಸ್ ಸ್ಟೇಷನ್ ಚವುಕದ ವರಿಗೆ. ಈ ಮಧ್ಯೆ ಇರುವ ಅಮ್ಮಾಚವುದ್ರಿ ಪಾಳ್ಯ, ಗಂಗಮ್ಮಚೇರಿ ರಸ್ತೆಗಳು, ಗಲ್ಲಿಗಳು. |
| 13 | ,, | 2 | ಕಲಾಸಿ ಲೈನು ಹಳೇ ಪೊಲೀಸ್ ಸ್ಟೇಷನ್ನಿಂದ ಕೊರಚರ ಪಾಳ್ಯದ ರೋಡ್ ಕಾರಂಜಿ ಕೆರೆಕಟ್ಟೆ ಬುಚ್ಚಣ್ಣನ ತೋಪುವರಿಗೂ, ಅಲ್ಲಿಂದ ಉಪ್ಪಾರಹಳ್ಳಿ, ಚಿಕ್ಕಮಾವಳ್ಳಿ, ದೊಡ್ಡ ಮಾವಳ್ಳಿ, ಕನಕನಪಾಳ್ಯ ಲಾಲ್‌ಬಾಗ್ ರೋಡ್ ಗೇಟಿನ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು. |
| 14 | VII | ,, | 7ನೇ ಡಿವಿಜನ್ ಕೋಟೆ ಮಾಮೂಲ್ ಮೇರಿಗೆ. |
| 15 | ,, | ,, | ಚಾಮರಾಜೇಂದ್ರಪೇಟೆ, ಹೊಸ ತರಗಿನಪೇಟೆ, ಗುಟ್ಟಹಳ್ಳಿ, ಗವಿಪುರ, ಮಾದಿಗರ ಪಾಳ್ಯ ವಗೈರೆ ಡಿವಿಜನ್‌ಗೆ ಸೇರಿದ ರೋಡ್‌ಗಳು, ಗಲ್ಲಿಗಳು ಯಾವತ್ತು. |
| 16 | ,, | ,, | ಬಸವಣ್ಣನಗುಡಿ ಎಕ್ಸ್‌ಟೆನ್‌ಷನ್. |
| 17 | ,, | ,, | ಮಲ್ಲೇಶ್ವರ ಎಕ್ಸ್‌ಟೆನ್‌ಷನ್. |

ತಾರೀಖು 22ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಇದರಡಿ ನಮೂದಿಸಿ ಇರುವ ಹುಲ್ಲುಗಾವಲುಗಳನ್ನು 1903—04ನೇ ಸಾಲಿಗೆ ಅಂದರೆ 1903ನೇ ಇಸವಿ ಜುಲೈ ಗುರ್ರ್ರ ಲಾಗಾಯತು 1904ನೇ ಇಸವಿ ಜೂನ್ ಆಖೈರ್ ಮಿನಹು ರೂಢಿಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ. ಎಲ್ಲಾದಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಪ್ರೆಸಿಡೆಂಟರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆಯ ಹುಲ್ಲುಗಾವಲನ್ನು ಪಡದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರೂ ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್‍ಯಾಂಪಾರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನ ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾದೀತು.

6. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರ್ವಾರ್ ಹೇಳಿದ ಕೂಡ್ಲೆ ಬಿನ್ ತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರದು ಇರತಕ್ಕದ್ದು.

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನ ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಠೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಮೊಬಲಗು ಕಂಟ್ರಾಕ್ಟು ಆಖ್ಯೆರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

## ತಪಶೀಲ್.

| ನಂಬರು | ಹುಲ್ಲುಗಾವಲುಗಳ ಹೆಸರು. | ತಪಶೀಲ್. |
|---|---|---|
| 1 | ಧರ್ಮಾಂಬುಧಿಕೆರೆ ಒಳಗೆರೆ ಮತ್ತು ಕೆರೆಕಟ್ಟೆ ಹುಲ್ಲು ... | ಹುಲ್ಲು ಕೊಯಿದುಕೊಳ್ಳುವ ಮಾತ್ರವೆ ದನಗಳನ್ನು ಬಿಟ್ಟು ಮೇಯಿಸಕೂಡದು. |
| 2 | ಧರ್ಮಾಂಬುಧಿ ಕಟೆ ಕಾಲ್ವೆ 2ಕ್ಕೆ ... | ಡಿಟೋ |
| 3 | ಮ್ಯುನಿಸಿಪಲ್ ತೋಟ .. .... | ಡಿಟೋ |
| 4 | ಚಿಕ್ಕರಾಯನ ಕೆರೆಕಟ್ಟೆ ಕೆಳಗೆ ... ... | ದನಗಳನ್ನ ಮೇಯಿಸಿಕೊಳ್ಳುವದಕ್ಕೆ. |
| 5 | ಈ ಪೈಕಿ ಸ್ಮಶಾನದ ಬೈಲ್ ಹುಲ್ಲು .. .. | ಡಿಟೋ |
| 6 | ಕೋಟೆ ರ್ಯಾಂಪಾರ್ಟಿನ ಹುಲ್ಲು ಕಂದಕದ ಸುತ್ತು ರಸ್ತೆವರಿಗೆ. ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ಪ್ರದೇಶ ವಿನಹ (ಆಸ್ಪತ್ರೆ ಕಡೆಗೆ ಹೋಗಕೂಡದು.) | ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು. |
| 7 | ಲಾಲ್‌ಬಾಗ ಮಾವಹಳ್ಳಿ ಕೆರೆ ... .. | ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯವಿಲ್ಲದಂತೆ. |
| 8 | ದೊಡ್ಡ ಬೈಲ್‌ಖಾನೆ ... .. | ಡಿಟೋ |
| 9 | ಕುಂಬಾರಗುಂಡಿ ಹುಲ್ಲುಗಾವಲ್ ... | ಡಿಟೋ |
| 10 | ಆರ್ಸಿಕುಂಟೆಪಕ್ಕದ ಮತ್ತು ಒಳಗಿನ ಹುಲ್ಲು .. | ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ, ವಳಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ. |
| 11 | ದಂಡಿಗೆ ಹೋಗುವ ಶಿಡ್ಲಿ ರೋಡ್ ರಸ್ತೆಗೆ ಪಶ್ಚಿಮ ಭಾಗ ಇರತಕ್ಕ ಹುಲ್ಲು. | ಡಿಟೋ |
| 12 | ಲಂಡರ್ಮಿರ್ಸ ಸ್ಕೂಲ್ ಪಕ್ಕದ ಹುಲ್ಲುಗಾವಲ್ ... | ಡಿಟೋ |
| 13 | ಎಲಹಂಕದಬಾಗಲಿನಿಂದ ಬಳೇಬಾಗಲಿಗೆ ಹೋಗುವ ರಸ್ತೆ ಬಲಭಾಗದ ಕಾಲವೆದಡದ ಹುಲ್ಲು | ಡಿಟೋ |
| 14 | ಸಂಪಂಗಿಕೆರೆ ಒಳಗೆರೆ ಹುಲ್ಲುಗಾವಲ್, ಬ್ರೌನ್ ಸಾಹೇಬರಿಗೆ ಸೇರಿದ್ದು ವಿನಹಾ, ಮ್ಯುನಿಸಿಪಾಲಿಟಿಗೆ ಸೇರಿದ್ದು | ದನಗಳನ್ನ ಬಿಟ್ಟು ಮೇಯಿಸುವದಕ್ಕೆ. |
| 15 | ಕೆಂಗೇರಿಬಾಗಲ್ ಬಾರಕೋಸ್‌ಬಳಿ ಇರುವ ಕಾವಲ್ ಜಮೀನಿನಲ್ಲಿ, ನಾಟುಗಳು ಹಾಕತಕ್ಕ ಬಗ್ಯೆ ಉಪಯೋಗಿಸಿಕೊಂಡಿರುವ ಜಮೀನ್ ಶಿವಾಯಿ, ಮರ್ಕಾ ಹದ್ದುಬಸ್ತು ಮಾರ್ಕ್ ಮಾಡಿರುವ ಸ್ಥಳ ವಿನಹ, ನಿಂತ ಜಮೀನ್‌ನಲ್ಲಿ ಬೀಳತಕ್ಕ ಹುಲ್ಲು | ದನಗಳನ್ನ ಬಿಟ್ಟು ಮೇಯಿಸುವದಕ್ಕೆ. |
| 16 | ಮ್ಯುನಿಸಿಪಲ್ ಲಿಮಿಟ್‌ಗೆ ಸೇರಿದ ವೆಸ್ಟರ್ನ್ ಎಕ್ಸ್‌ಟೆನ್ಷನ್‌ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಜಾತಾ ವುಳಿದ ಬೋರ್ಡಿಗೆ ಸೇರಿದ ಜಮೀನ್‌ನಲ್ಲಿಯೂ, ಭೋಗೇನಹಳ್ಳಿ ವಿನ್ನೇಬಳಿಯಲ್ಲಿಯೂ ಇರತಕ್ಕ ಜಮೀನ್‌ನಲ್ಲಿಯೂ ಸಹಾ | ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ. |
| 17 | ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು .. ... | ಮೇಯಿಸಿಕೊಳ್ಳುವದಕ್ಕೆ. |
| 18 | ದಂಡು ವುಪ್ಪಾರಹಳ್ಳಿ ವೂರುಮುಂದಿನ ಹುಲ್ಲುಗಾವಲು .. | ರೈಲ್ವೆ ಕಾಂಪೌಂಡಿನ ಬೇಲಿ ಮತ್ತು ಜಮೀನ್ ಶಿವಾಯಿ, ಮೇಯಿಸಿಕೊಳ್ಳುವದಕ್ಕೆ. |
| 19 | ಮಿಲ್ಲರ್ ಒಳಗೆರೆ ಹುಲ್ಲು ... ... | ಕೊಯಿದುಕೊಳ್ಳುವದಕ್ಕೆ. |

## ನೋಟಿಸ್.

ತಾರೀಖು 30ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಬೆಂಗಳೂರು ಸಿಟಿ ಮ್ಯೂನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್‌ಗಳಲ್ಲಿ 1903ನೇ ಇಸವಿ ಜುಲೈ 1ನೇ ತಾರೀಖು ಲಾಗಾಯಿತು 1904ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ, ಮಂಜೂರಾಗಿರುವ ದರಗಳ ಮೇರಿಗೆ ತೆರಿಗೆಯನ್ನ ವಸೂಲ್ಮಾಡುವದಕ್ಕೆ ಮೊಹರ್ ನಿಶಿ ದರಖಾಸ್ತುಗಳು

ಇಷ್ಟವಿದ್ದವರು ಈ ಕೆಳಗೆ ಸಹಿ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 3 ಘಂಟೆ ಒಳಗಾಗಿ ಕೊಡಬಹುದು.

I. ಸಿಟಿ ಮಾರ್ಕೆಟ್ ಒಳಗೆ ಮಾರುವದಕ್ಕೋಸ್ಕರ ತರುವ ತರಕಾರಿ ಮತ್ತು ಹಣ್ಣುಗಳು, ಉರಳುಗೆಡ್ಡೆ, ಈರುಳ್ಳಿ, ಕಡ್ಲೆಕಾಯಿ, ತೆಂಗಿನಕಾಯಿ ಮತ್ತು ಇತರ ಜಿನಸಿಗಳ ಗೂಡೆಗಳಿಗೂ, ಗಾಡಿಗಳಿಗೂ, ಮತ್ತು ಮೀನು ಮತ್ತು ಕೋಳಿ ಮಾರ್ಕೆಟ್‌ಗಳಿಗೆ ತರುವ ಮೀನು, ಕೋಳಿ, ಕೋಳಿ ಮೊಟ್ಟೆಗಳ ಗೂಡೆಗಳಿಗೂ ಇದರಡಿ ನಮೂದಿಸಿರುವ ರೇಟ್‌ಗಳು ಅನುಸರಿಸಿ ತೆರಿಗೆ ವಸೂಲ್ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟ್‌ಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ.

| | |
|---|---|
| ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಬೈಲ್ .. ... | ಮಾರ್ಕೆಟ್ |
| ಉಪ್ಪಾರಪೇಟೆ .. .. .. .. | ಡಿಟೋ |
| ತಿಗಳರಪೇಟೆ ಧರ್ಮರಾಯನ ಗುಡಿ ಬಳಿ ಬೈಲ್ .. .. | ಡಿಟೋ |
| ಕಲಾಸಿಪಾಳ್ಯ .. .. .. .. | ಡಿಟೋ |
| ಅಕ್ಕಿಪೇಟೆಯಲ್ಲಿರುವ .. .. .. | ಡಿಟೋ |

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ವ್ಯಾಪಾರ ಮಾಡುವ ಜಮೀನಿಗೆ ರುಸುಂ ವಸೂಲ್ಮಾಡುವದಕ್ಕೆ.

IV. ತಗರದ ಸ್ಟಾಲ್‌ಗಳಲ್ಲಿ ಹಂಗಾಮಿಯಾಗಿ ಬಿಕರಿ ಮಾಡುವ ಅಂಗಡಿಯವರಿಂದ ವ್ಯಾಪಾರ ಮಾಡುವ ಸ್ಥಳಕ್ಕೆ ರುಸುಂ ವಸೂಲ್ಮಾಡುವದಕ್ಕೆ.

V. ಮೀನು ಮತ್ತು ಕೋಳಿ ಮಾರ್ಕೆಟ್‌ಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ತೆರಿಗೆ ವಸೂಲ್ಮಾಡುವದಕ್ಕೆ.

ಮೇಲ್ಕಂಡ ಮಾರ್ಕೆಟ್‌ಗಳಲ್ಲಿ ತಿಂಗಳಗಟ್ಲೆ ತೆರಿಗೆ ಕೊಡುವವರಿಂದ ತೆರಿಗೆಯನ್ನು ವಸೂಲ್ಮಾಡಕೂಡದು. ಮತ್ತು ಹಗಲು ರಾತ್ರೆ ಸಹ ಸಾಮಾನುಗಳು ತೆಗೆಯದೆ ಅಂಗಡಿಗಳನ್ನು ಖಾಯಂ ಇಟ್ಟುಕೊಂಡಿರುವವರಿಂದ ತೆರಿಗೆಯನ್ನು ವಸೂಲ್ಮಾಡಕೂಡದು.

2. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಸಿಟಿ ಮ್ಯುನಿಸಿಪಲ್ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್‌ಗಳಲ್ಲಿ ತೆರಿಗೆ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಕೂಡಾ ನಗದಾಗಲಿ, ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣೀ ಹಣವನ್ನು ಹಾಜರಿ ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬವದಕ್ಕೆ ಈ ಕೆಳಗೆ ಸಹಿ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನು ಅವನು ಒಡನೆ ಹಾಜರ್ಮಾಡಬೇಕು. ಮತ್ತು ಅಂತಾ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವಶ್ಯಕವಾದ ಇಜಾರೆ ಮುಚ್ಚಳಿಕೆಯನ್ನು ಬರದುಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಕಂಟ್ರಾಕ್ಟುದಾರನು ಇದರ ಕೆಳಗೆ ಕಾಣಿಸಿದ ಪ್ರಕಾರ ಹಣ ವಸೂಲ್ಮಾಡಿಕೊಳ್ಳತಕ್ಕದ್ದಾಗಿದೆ.

A. ಸಿದ್ದಿಕಟ್ಟೆಯಲ್ಲಿ ಇರುವ ಎನ್‌ಕ್ಲೋಜಡ್ ವೆಜಿಟೆಬಿಲ್ ಮಾರ್ಕೆಟ್ಟನಲ್ಲಿ. } ಇದರ ತಪಸೀಲ್ ನಮೂದಿನಿಂದ ಕಂಟ್ರಾಕ್ಟದಾರನು ಕಂಟ್ರಾಕ್ಟಿಗೆ ಸಂಬಂಧಪಟ್ಟ ಪ್ರತಿ ಒಂದು ಸ್ಥಳದಲ್ಲಿಯೂ ಸ್ವಂತಲಾಗವಡಿನಿಂದ ಒಂದು ಬೋರ್ಡು ಹಾಕಿರಬೇಕು.

| | | ರೂ. | ಆ. | ಪೈ. |
|---|---|---|---|---|
| 1. | ದೊಡ್ಡ ಮಂಕ್ರಿ 1ಕ್ಕೆ ತರಕಾರಿ ... .. .. | 0 | 0 | 2 |
| 2. | ಹರಿವೆಸೊಪ್ಪುಗಳ ಮಂಕ್ರಿ 1ಕ್ಕೆ ... .. | 0 | 0 | 1 |
| 3. | ಭಂಡಿ ತುಂಬಾ ತರಕಾರಿ, ಹಣ್ಣುಗಳು ಒಟ್ಟು ಬಿಕರೀಗೆ ಬಂದರೆ .. | 0 | 2 | 0 |
| 4. | ಮಾರ್ಕೆಟ್ಟನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ಬರುವ ತರಕಾರಿ ಭಂಡಿ 1ಕ್ಕೆ | 0 | 1 | 0 |
| 5. | 5 × 5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸಾಯಂಕಾಲದ ಅಂಗಡಿಗೆ .. | 0 | 0 | 3 |
| 6. | ಸದರಿ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜು ಮಾಡಿಸುವ ಜಾಗಾಕ್ಕೆ | 0 | 1 | 0 |
| 7. | ವೆಜಿಟೆಬಿಲ್ ಮಾರ್ಕೆಟ್ ಒಳಗಾಗಿ ಟೆಂಪರೆರಿಯಾಗಿ ಇಟ್ಟುಕೊಳ್ಳುವ ಸದರಿ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ . .. .. | 0 | 0 | 2 |
| 8. | ಸೇಬು, ಅಂಜೂರ, ದಾಳಿಂಬ, ಚಕ್ಕೋತ ಮತ್ತು ಮಾವು ವಗೈರೆ ಹಣ್ಣುಗಳ ಮಂಕ್ರಿ 1ಕ್ಕೆ | 0 | 0 | 3 |
| 9. | ಮಾರ್ಕೆಟ್ನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ತರಗಿನಪೇಟೆ ವಗೈರೆ ಸ್ಥಳದಿಂದ ಬರುವ ಉರಳಗೆಡ್ಡೆ, ಈರುಳ್ಳಿ, ಕಡ್ಲೆಕಾಯಿ ವಗೈರೆ ಮೂಟೆ 1ಕ್ಕೆ .. | 0 | 0 | 3 |
| 10. | ರೈಲ್‌ನಿಂದ ಬರುವ ಮೂಟೆ ಭಂಡಿ ಭರ್ತಿ ಕಡ್ಲೆಕಾಯಿ, ಉರಳಗೆಡ್ಡೆ, ಈರುಳ್ಳಿ, ಮಾವಿನಹಣ್ಣು, ಬಾಳೆಹಣ್ಣು, ವಗೈರೆ ಒಂದೇ ವಿಧವಾದ ಬಾಬಿಗೆ .. . | 0 | 1 | 0 |
| 11. | ಕೋಳಿ, ಕೋಳಿ ಮೊಟ್ಟೆ ಅಥವಾ ಆಹಾರಕ್ಕೆ ಉಪಯುಕ್ತವಾದ ಇತರ ಪಕ್ಷಿಗಳ ಗೂಡೆ 1ಕ್ಕೆ | 0 | 0 | 3 |
| 12. | ಮೀನಿನ ಸ್ಟಾಲ್ 1ಕ್ಕೆ .. ... | 0 | 0 | 2 |

7. ವೆಜಿಟೆಬಿಲ್ ಮಾರ್ಕೆಟ್ ಹಿಂಭಾಗದಲ್ಲಿರುವ ಮೈದಾನದ ಯಾವ ಭಾಗದಲ್ಲಾದರೂ, ಕಬ್ಬಿಣ ವಗೈರೆ ಸಾಮಾನುಗಳು ರಾತ್ರಿ ಹಗಲು ಸಹಾ ತೆಗೆಯದೆ ಇಟ್ಟುಕೊಂಡು ವ್ಯಾಪಾರ ಮಾಡುವವರಿಂದ ಅಮಾನಿಯಾಗಿ ಮಾಹೆಯಾನಾ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಟೆಂಪರರಿಯಾಗಿ ಇಡುವವರಿಂದ ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳಬಹುದು.

8. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಕಂಟ್ರಾಕ್ಟ ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಸೀತಿ ಪಡದುಕೊಳ್ಳಬೇಕು.

9. ಕೋಟೆ ಆಂಜನೇಯ ದೇವಸ್ಥಾನಕ್ಕೆ ಬಿಟ್ಟಿರುವ ಮೆರ್ಯಿ ಡ್ರೈವ್ ಪಕ್ಕದ ಖಾಲಿ ಜಮೀನಿನಲ್ಲಿ ವಸೂಲಾಗತಕ್ಕದ್ದು ವೆಜಿಟೆಬಿಲ್ ಮಾರ್ಕೆಟ ಕಂಟ್ರಾಕ್ಟುದಾರ್ರೇ ವಸೂಲ್ಮಾಡಿಕೊಂಡು ಮಾಹೆ 1ಕ್ಕೆ ಎರಡು ರೂಪಾಯಿಗಳಂತೆ ಡಿಟೋ ದೇವಸ್ಥಾನದ ಏಜಂಟರಿಗಾಗಿ ಅವರಿಗ ಪಾವತಿ ಬಗ್ಯೆ ಕಂಟ್ರಾಕ್ಟು ಮೊಬಲಗಿನ ಸಂಗಡ ಇರಸಾಲ್ ಮಾಡಬೇಕು.

10. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟ ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

11. ಕೋಟೆ ಗ್ಲೇಸಸ್ ಬಳಿ ಇರತಕ್ಕ ಕಬ್ಬಿನ ಅಂಗಡಿಗಳು ಮತ್ತು ಇತರ ಅಂಗಡಿಗಳವರಿಂದ ರುಸುಂ ವಸೂಲ್ಮಾಡತಕ್ಕ ಬಾಬು ಈ ಕಂಟ್ರಾಕ್ಟಿಗೆ ಶೇರಿ ಇರುವದಿಲ್ಲ.

12. ಈ ಷರತ್ತುಗಳಿಗೆ ವಿರೋಧವಾಗಿ ನಡದುಕೊಳ್ಳುವ ಪಕ್ಷಕ್ಕೆ ಕೂಡ್ಲೆ ಕಂಟ್ರಾಕ್ಟು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕೀಗೆ ಭರ್ತಿಯಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬ್ದಾರಿ ಮಾಡಿ ಅವನ ಜೆಂದಿಗಿ ಜಫ್ತಿ ಹರಾಜು ಮೂಲಕ ವಸೂಲ್ಮಾಡಲ್ಪಡುತ್ತೆ.

13. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬೇಕು.

14. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ್ ತಕರಾರ ತೆಗದುಕೊಳ್ಳಲು ಸಲೀಸ್ ಏರ್ಪಾಡು ಇಡತಕ್ಕದ್ದು.

ಪಿ. ಪಲ್ಪ್, ಫಾರ್ ಪ್ರೆಸಿಡೆಂಟ್.

---

## ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿನಿಂದ.

### ನೋಟಸ್.

ತಾರೀಖು 5ನೇ ಜೂನ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸನ್ 1903ನೇ ಇಸವಿ ಜುಲೈ ಗುರ್ರೆ ಲಾಗಾಯಿತು ಸನ್ 1904ನೇ ಇಸವಿ ಜೂನ್ ಆಖೈರುವರಿಗೆ ಅಂದರೆ ಒಂದು ವರುಷಕ್ಕೆ ಮೈಸೂರು ಟವನ್ನಲ್ಲಿರತಕ್ಕ ಮ್ಯುನಿಸಿಪಲ್ ದೀಪಗಳಿಗೆ ಬೇಕಾಗುವ ಈ ಕೆಳಗ ನಮೂದು ಮಾಡುವ ಕೆರೊಸೀನ್ ಯಂಣೆ ಟಿನ್ನುಗಳನ್ನು ಸರಬರಾಯಿ ಮಾಡಲು ಇಚ್ಛೆಯುಳ್ಳವರು ಡಿಟೋ ಯಂಣೆ ಟಿನ್ ಒಂದಕ್ಕೆ ಯಾವ ದರದ ಮೇರೆಗೆ ಖರೀದಿಗೆ ಕೊಡುವರೆಂಬುವದಕ್ಕೆ ದರಖಾಸ್ತು ಕೊಡಬಹುದು.

ದರಖಾಸ್ತುಗಳನ್ನು ಲಖೋಟೆಗಳಲ್ಲಿ ಗರ್ಭೀಕರಿಸಿ ಮೊಹರು ಮಾಡಬೇಕು. ಡಿಪಾಜಿಟಿಗಾಗಿ (50—0—0) ಐವತ್ತು ರೂಪಾಯಿಗಳನ್ನು ನಗದೇ ಆಗಲಿ ಅಥವಾ ಮದ್ರಾಸ್ ಕರೆನ್ಸಿ ನೋಟ್ ಮೂಲಕವೇ ಆಗಲಿ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿಗೆ ಜೂನ್ ಮಾಹೆ 22ನೇ ತಾರೀಖಿನ ವಳಗಾಗಿ ಡಿಟೋ ದರಖಾಸ್ತುಗಳಕೂಡ ಕಳುಹಿಸಬೇಕು.

ಡಿಟೋ ಮಾಹೆ ತಾರೀಖು 22ರ ವರಿಗೂ ಮೇಲ್ಕಂಡ ದರಖಾಸ್ತುಗಳನ್ನು ತೆಗದುಕೊಳ್ಳಲ್ಪಡುವದು.

ಸನ್ 1903ನೇ ಇಸವಿ ಜೂನ್ 22ನೇ ತಾರೀಖಿನ ಮಧ್ಯಾಹ್ನ 2 ಘಂಟೆಗೆ ಟವನ್ ಹಾಲ್ನಲ್ಲಿ ಪ್ರೆಸಿಡೆಂಟ್ ಸಾಹೇಬರವರಿಂದ ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರಿಂದ ಹಾಜರು ಇರತಕ್ಕ ದರಖಾಸ್ತುದಾರ್ರುಗಳ ರೂಬರೂಬ್ ಸದರಿ ದರಖಾಸ್ತುಗಳು ತೆರಿಯಲ್ಪಡುವವು.

ಪ್ರೆಸಿಡೆಂಟ್ ಸಾಹೇಬರವರು ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರು ಯಾವದೊಂದು ಕಾರಣವನ್ನೂ ಹೇಳದೆ ಕಮ್ಮಿ ದರಕ್ಕೆ ಕೇಳುವ ದರಖಾಸ್ತುಗಳನ್ನೇ ಆಗಲಿ ಅಥವಾ ಇತರ ಯಾವ ದರಖಾಸ್ತುಗಳನ್ನೇ ಆಗಲಿ ವಜಾ ಮಾಡಲು ಅಧಿಕಾರವುಳ್ಳವರಾಗಿ ಇರುತ್ತಾರೆ.

ಮಂಜೂರಾದ ದರಖಾಸ್ತುದಾರ್ರು ಡಿಟೋ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 5 ಐದು ದಿವಸಗಳ ವಳಗಾಗಿ ಮೊದಲು ಹಾಜರು ಮಾಡಿದ (50—0—0) ಐವತ್ತು ರೂಪಾಯಿಗಳು ಡಿಪಾಜಿಟ್ ಅಲ್ಲದೆ ಜಾಸ್ತಿ (150—0—0) ಒಂದುನೂರ ಐವತ್ತು ರೂಪಾಯಿಗಳು ಡಿಪಾಜಿಟ್ಟಿಗಾಗಿ ಪಾವತಿ ಮಾಡಿ ರೂಲ್ಸ್ ಪ್ರಕಾರ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ಮಾಡಲು ತಪ್ಪಿದರೆ ಮೊದಲು ಹಾಜರು ಮಾಡಿದ ಡಿಪಾಜಿಟ್ ಮೊಬಲಗನ್ನು ಕಳದುಕೊಳ್ಳುವರು.

ಬರದುಕೊಡತಕ್ಕ ಮುಚ್ಚಳಿಕೆಯು ಖರಾರುಗಳು ಮತ್ತು ಇತರ ತಪಶೀಲುಗಳು ಸಹಾ ಮ್ಯುನಿಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(1) ಛಪ್ಪರ್ ಮಾರ್ಕ್ ಸೀಮೆಯಂಣೆ ಟಿನ್ನುಗಳು.
(2) ರಷ್ಯನ್ ಯಂಣೆ ಟಿನ್ 125ನೇ ಡಿಗ್ರಿ ಬಾಬತು.

ತಿಂಗಳು ಒಂದಕ್ಕೆ ಸುಮಾರು ಇನ್ನೂರು ಟಿನ್ನುಗಳ ವರಿಗೆ ಛಪ್ಪರ್ ಮಾರ್ಕ್ ಸೀಮೆಯಂಣೆ ಟಿನ್ನುಗಳು ಖರೀದಿಗೆ ತೆಗದುಕೊಳ್ಳಲ್ಪಡುತ್ತೆ.

ಕೆ. ಶ್ರೀನಿವಾಸರಾವ್, ವೈಸ್ ಪ್ರೆಸಿಡೆಂಟ್.

---

ತಾರೀಖು 29ನೇ ಮೇ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ನಮ್ಮ ತಂದೆಯಾದ ತುಮಕೂರು ವಾಸಸ್ಥ [illegible]ಡಿ ಚನ್ನಪ್ಪನವರ ಮಗ ಕಂಬದೂರಯ್ಯನಿಗೆ ಪಿತ್ಥಭ್ರಮಣೆಯಿಂದ, ಜ್ಞಾನ ಸ್ವಾಧೀನವಿಲ್ಲದೆ ಮನಸ್ವೀ ಇರುತ್ತಾನೆ. [illegible]ಂದ ಯಾರಾದರೂ, ಯಾವ ಮೂಲಕವಾದ ಲೇವಾದೇವಿಯನ್ನಾಗಲೀ, ಸೊತ್ತುಗಳು ಪರಭಾರೆಯನ್ನಾಗಲಿ ಇತರ ಯಾವವಿಧವಾದ ಟ್ರಾನ್ಸ್ಆಕ್ಷನ್ ಆಗಲೀ ನಡಿಸಿದಲ್ಲಿ ನಮ್ಮ ಆಸ್ತಿಯು ಅಂಥಾ ಟ್ರಾನ್ಸ್ ಆಕ್ಷನ್ಗೆ ಈಡಾಗಲಾರದು.

ರುಜು—ತುಮಕೂರಲ್ಲಿರುವ ಜವಳಿ ಅಂಗಡಿ ಕಂಬದೂರೈಯ್ಯನ ಮಗ
ಚನ್ನಪ್ಪನ ರುಜು.